೧೪೫೧ (೧೩೩೮) ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ನಗರದ ಒಳಚರಂಡಿ ವ್ಯವಸ್ಥೆಯ ಕಾಮಗಾರಿಗೆ ಇಲ್ಲಿಯವರೆಗೆ ಸರ್ಕಾರಕ್ಕೆ ತಗಲಿರುವ ವೆಚ್ಚ ಎಷ್ಟು?

ಆ) ಈ ಕಾಮಗಾರಿಯು ಪೂರ್ಣಗೊಂಡಿದೆಯೇ ಹಾಗೂ ಪೂರ್ಣಗೊಂಡಿದ್ದಲ್ಲಿ ಇದನ್ನು ಚಿಕ್ಕಮಗಳೂರು ನಗರ ಸಭೆಯ ಆಧೀನಕ್ಕೆ ವಹಿಸಿಕೊಡಲಾಗಿದೆಯೇ?

ಇ) ಒಳಚರಂಡಿ ಕಾಮಗಾರಿಯನ್ನು ಸರ್ಕಾರದಿಂದ ಅಧಿಕೃತವಾಗಿ ಮಂಜೂರಾದ ರೂಪುರೇಷೆಗಳ ಮೇರೆಗೆ ಸೂಚಿಸುವಂತೆ ಕೈಗೊಳ್ಳಲಾಗಿದೆಯೇ?

ಈ) ಈ ಕಾಮಗಾರಿಗೆ ಕೆಳಕಂಡ ಸಂಸ್ಥೆಗಳಿಂದ ಪಡೆದಿರುವ ಸಾಲದ ಮೊತ್ತವೆಷ್ಟು? (ಸಂಸ್ಥೆವಾರು ವಿವರ ನೀಡುವುದು) (೧) ಜೀವ ವಿಮಾ ನಿಗಮ (ಎಲ್‌ಐಸಿ), (೨) ಕರ್ನಾಟಕ ಸರ್ಕಾರ ಮತ್ತು (೩) ಇತರೆ ಹಣಕಾಸು ಸಂಸ್ಥೆಗಳು.

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತು ನಗರಾಭಿವೃದ್ಧಿ ಸಚಿವರು):-

ಅ) ಫೆಬ್ರುವರಿ ೧೯೯೨ರ ವರೆಗೆ ವೆಚ್ಚ ರೂ. ೫೧.೨೧ ಲಕ್ಷಗಳು.

ಆ) ಸದರಿ ಕಾಮಗಾರಿಯಲ್ಲಿ ಕೊಳಚೆ ನೀರನ್ನು ಶುದ್ದೀಕರಿಸಲು ನಾಲ್ಕು ಮೆಕ್ಯಾನಿಕಲ್ ಏರೇಟರ್ ಅಳವಡಿಸುವ ಕೆಲಸವನ್ನು ಬಿಟ್ಟು ಮಿಕ್ಕ ಎಲ್ಲಾ ಕೆಲಸಗಳು ೧೯೮೩-೮೪ರಲ್ಲಿಯೇ ಪೂರ್ಣಗೊಳಿಸಲಾಯಿತು. ನಗರ ಸಭೆಯವರು ಸದರಿ ಕಾಮಗಾರಿಯನ್ನು ವಹಿಸಿಕೊಂಡಿರುವುದಿಲ್ಲ.

ಇ) ಹೌದು.

ಈ) ೧) ಜೀವ ವಿಮಾ ನಿಗಮದಿಂದ ರೂ. ೨೬.೬೨ ಲಕ್ಷ

೨) ಕರ್ನಾಟಕ ಸರ್ಕಾರದಿಂದ ರೂ. ೨೩.೮೬ ಲಕ್ಷ

೩) ಡಿಬೆಂಚರ್ ಮೂಲಕ ರೂ. ೩.೦೦ ಲಕ್ಷ

೪) ನಗರಸಭಾ ವತಿಯಿಂದ ರೂ. ೩.೦೧ ಲಕ್ಷ

ಒಟ್ಟು ರೂ. ೫೬.೯೯ ಲಕ್ಷ

ರಾಜಾಜಿನಗರದ ವ್ಯಾಪ್ತಿಯಲ್ಲಿ ಬರುವ ರೆವೆನ್ಯೂ ನಿವೇಶನದಾರರಿಗೆ ಮರು ಹಂಚಿಕೆಯ ಅರ್ಜಿ ಬಗ್ಗೆ

೧೪೫೭ (೨೦೯೯) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ರಾಜಾಜಿನಗರದ ೨ನೇ ಹಂತ ೩ನೇ ಹಂತ ಮಂಜುನಾಥನಗರ ವ್ಯಾಪ್ತಿಯಲ್ಲಿರುವ ರೆವೆನ್ಯೂ ನಿವೇಶನದಾರರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮರು

ಹಸ್ತಾಂತರಣ, ಮರು ಹಂಚಿಕೆ ಮಾಡಲು ಕೋರಿ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮರು ಹಸ್ತಾಂತರ/ಮರು ಹಂಚಿಕೆ ಮಾಡಿ ಹಕ್ಕು ಪ್ರಮಾಣ ಪತ್ರವನ್ನು ಎಷ್ಟು ರೆವಿನ್ಯೂ ನಿವೇಶನದಾರರಿಗೆ ಕೊಡಲಾಗಿದೆ?

ಇ) ಇನ್ನು ಉಳಿದ ನಿವೇಶನದಾರರು ಎಷ್ಟು? ಹಾಗೂ ಅವರಿಗೆ ಯಾವಾಗ ಹಕ್ಕು ಪ್ರಮಾಣ ಪತ್ರವನ್ನು ಕೊಡಲಾಗುವುದು? ಹಾಗೂ ಕೊಡದೇ ಇರಲು ಕಾರಣವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):-

ಅ) ಈ ತನಕ ೧೦,೫೬೭ ಅರ್ಜಿಗಳು.

ಆ) ದಿನಾಂಕ ೮-೫-೧೯೮೬ ರಂದು ತಡೆಯಾಜ್ಞೆ ನೀಡುವುದಕ್ಕೆ ಮುಂಚೆ ೬೯೫೨ ನಿವೇಶನದಾರರಿಗೆ ಹಕ್ಕು ಪತ್ರ ಕೊಡಲಾಗಿದೆ.

ಇ) ಇನ್ನೂ ೬೬೧೫ ನಿವೇಶನದಾರರಿದ್ದು ಅವರಿಗೆ ಹಕ್ಕು ಪ್ರಮಾಣ ಪತ್ರವನ್ನು ಕೊಟ್ಟಿರುವುದಿಲ್ಲ. ಮರು ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಯಲ್ಲಿ ಅವಕಾಶವಿಲ್ಲವೆಂಬ ಬಗ್ಗೆ ಹಲವಾರು ಪ್ರಕರಣಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿದ ತೀರ್ಪುಗಳ ಹಿನ್ನೆಲೆಯಲ್ಲಿ ಮರು ಹಂಚಿಕೆ ಮಾಡದಂತೆ ತಡೆಯಾಜ್ಞೆ ಜಾರಿಯಲ್ಲಿರುತ್ತದೆ.

ಜನತಾ ಮನೆ ಮತ್ತು ಇಂದಿರಾ ಆವಾಜ್ ಮನೆಗಳ ಬಗ್ಗೆ

೧೪೫೯ (೨೦೬೬) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೮-೮೯, ೧೯೮೯-೯೦, ೧೯೯೦-೯೧ ಹಾಗೂ ೧೯೯೧-೯೨ನೇ ಸಾಲಿನಲ್ಲಿ ಅಪೂರ್ಣವಾಗಿರುವ ಹಾಗೂ ಪ್ರಾರಂಭ ಮಾಡದೇ ಇರುವ ಜನತಾ ಮನೆ, ಇಂದಿರಾ ಆವಾಜ್ ಮನೆಗಳ ಸಂಖ್ಯೆ ಎಷ್ಟು?

ಆ) ಸದರಿ ಅಪೂರ್ಣವಾಗಿರುವ ಹಾಗೂ ಪ್ರಾರಂಭಿಸದೇ ಇರುವ ಮನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಹಣವೆಷ್ಟು?

ಇ) ಈ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

	ಅಪೂರ್ಣಗೊಂಡ ಮನೆಗಳು		ಪ್ರಾರಂಭ ಮಾಡದೇ ಇರುವ ಮನೆಗಳು	
ವರ್ಷ	ಜನತಾ	ಇಂದಿರಾ ಆವಾಜ್ ಯೋಜನೆ	ಜನತಾ	ಇಂದಿರಾ ಆವಾಜ್ ಯೋಜನೆ
೧೯೮೮-೮೯	೪೨೫೬೭	೧೪	ಯಾವುದೂ ಇಲ್ಲ	